ಇಂದು ದಿಃ **13-02-2025** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಹೆಚ್.ಇ ವಕೀಲರಿಂದ ವಾದಿ ಪರಃ**

ನಿ.ಪಿ-1 ನ್ನು ನಾನು ನಂತರದಲ್ಲಿ ಮರುದಿನ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗ ಪತ್ರದಲ್ಲಿ ನಾನು ನನ್ನ ಹಿಸ್ಸೆಗೆ ಎಕರೆ ಲೆಕ್ಕದಲ್ಲಿ ಹಿಸ್ಸೆ ತೋರಿಸಿ, ಅವರಿಗೆ ಗುಂಟೆ ಲೆಕ್ಕದಲ್ಲಿ ಹಿಸ್ಸೆ ತೋರಿಸಿ ತಯಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ತಮ್ಮನಿಗೂ ಮತ್ತು ತಂಗಿಗೂ ಸಮಪಾಲು ಇದೆ ಎಂದರೆ ಸಾಕ್ಷಿ ಅವರೇ ಭಾಗ ಮಾಡಿಕೊಟ್ಟಿದ್ದು ಎಂದು ಹೇಳುತ್ತಾರೆ. ಸಾಕ್ಷಿ ನಾನು ಒಪ್ಪುವುದಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಕಾನೂನಿನ ಪ್ರಕಾರ ನನ್ನ ತಂಗಿ ಮತ್ತು ತಮ್ಮನಿಗೂ ಸಮಾನ ಹಿಸ್ಸೆ ಬರುತ್ತದೆ ಎಂದರೆ ಸಾಕ್ಷಿ ಪಾಲು ಆಗಿದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ರಸ್ತೆಗೆ ಬಿಟ್ಟಿರುವ ಜಾಗದ ಒಪ್ಪಂದದ ಕರಾರು ಪತ್ರ ತೋರಿಸಿ ಅದರಲ್ಲಿ ನಿಮ್ಮ ಸಹಿ ಇದೆ ಎಂದರೆ ಸರಿ. ಸಾಕ್ಷಿ ಅಕ್ಕ ಪಕ್ಕದವರು ಎಂದು ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ವಿಭಾಗಪತ್ರದಲ್ಲಿ ರಸ್ತೆಯ ಬಗ್ಗೆ ಈ ಕರಾರು ಪತ್ರದ ಪ್ರಕಾರ ಪ್ರಸ್ತಾಪಿಸಿಲ್ಲ ಎಂದರೆ ಸಾಕ್ಷಿ ರಸ್ತೆ ಇಲ್ಲ ಎಂದು ಹೇಳುತ್ತಾರೆ.

ಪಾಲುವಿಭಾಗ ಪತ್ರದ ಪ್ರಕಾರ ಮೊದಲು ನನ್ನ ಹಿಸ್ಸೆ ಬರುತ್ತದೆ. ಶಿವಮೊಗ್ಗ ಹೊನ್ನಾಳಿ ರಸ್ತೆಯ ಸುರುವನ್ನೆ ಗ್ರಾಮದಿಂದ ಬರುವ ರಸ್ತೆ ಮೊದಲು ನನ್ನ ಹಿಸ್ಸೆಯ ಮುಖಾಂತರ ಹೋಗುತ್ತದೆ ಎಂದರೆ ಸರಿ. ಸಾಕ್ಷಿ ಕಾಲು ದಾರಿ ಇದೆ ಮನೆಗೆ ಹೋಗಲು ಬಿಟ್ಟುಕೊಂಡಿರುತ್ತೇವೆ ಎಂದು ಹೇಳುತ್ತಾರೆ. ಸಾಕ್ಷಿ ವಾದಿಯರು ಸಹ ಸದರಿ ಕಾಲುದಾರಿಯಲ್ಲಿ ಓಡಾಡುತ್ತಾರೆ ಎಂದು ಹೇಳುತ್ತಾರೆ. ನಾನು ಸದರಿ ರಸ್ತೆಯನ್ನು ಬಂದ್ ಮಾಡಿ ವಾದಿಯರಿಗೆ ಓಡಾಡಲು ತೊಂದರೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆಗ ವಾದಿಯರಿಗೆ ನಾನು ಪಾಲುವಿಭಾಗ ಸೃಷ್ಠಿ ಮಾಡಿದ ಬಗ್ಗೆ ಗೊತ್ತಾಯಿತು ಎಂದರೆ

ಸರಿಯಲ್ಲ. ನಂತರದಲ್ಲಿ ವಾದಿಯರು ನನಗೆ ಪಾಲುವಿಭಾಗ ಪತ್ರದ ಬಗ್ಗೆ ವಿಚಾರಿಸಿದರು ಎಂದರೆ ಸರಿಯಲ್ಲ. ವಾದಿಯರು ನಂತರದಲ್ಲಿ ನನಗೆ ಪಾಲನ್ನು ಸರಿಪಡಿಸಿಕೊಡಿ ಎಂದು ಕೇಳಿದರು ಎಂದರೆ ಸರಿಯಲ್ಲ. ಮೋಸದಿಂದ ಪಾಲುವಿಭಾಗ ಪತ್ರವನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.